ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

ಮಂಗಳವಾರ, ೧೮ನೇ ಏಪ್ರಿಲ್ ೧೯೯೫ ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.20 ಗಂಟೆಗೆ ಸಮಾವೇಶಗೊಂಡಿತು.

Tuesday, 18th April 1995 Sayana Sowra Chithra 16 (S.E.)

ಅಧ್ಯಕ್ಷರು ಶ್ರೀ ರಮೇಶ್‌ಕುಮಾರ್ ಅವರು ಪೀಠವನ್ನು ಅಲಂಕರಿಸಿದ್ದರು.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, 11-30 ಆದರೂ ಮಂತ್ರಿಗಳಿಗೆ ಇನ್ನೂ ಬಿಡುವಾಗಿಲ್ಲ, ಇನ್ನೂ ಬಂದಿಲ್ಲ ಆದರೂ ಕಾರ್ಯಕಲಾಪ ಪ್ರಾರಂಭ ಮಾಡಬಹುದು ಎಂದು ಹೇಳುವುದಾದರೆ. . . .

ಅಧ್ಯಕ್ಷರು : ಐದಾರು ಜನ ಇದ್ದಾರಲ್ಲ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ : ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಹರಡಿರುವ ಮಲೇರಿಯಾ ರೋಗದ ನಿಯಂತ್ರಣ.

* ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ಈಗ ತಾನೇ ತಂದೆ . ಇವತ್ತು ಕರ್ನಾಟಕ ರಾಜ್ಯದಲ್ಲಿ ಬಹುತೇಕ ಜಿಲ್ಲೆಗಳಲ್ಲಿ ವಿಶೇಷವಾಗಿ ಶಿವಮೊಗ್ಗ ಜಿಲ್ಲೆ ಚಿತ್ರದುರ್ಗ ಜಿಲ್ಲೆ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಲೇರಿಯಾ ರೋಗ ವ್ಯಾಪಕವಾಗಿ ಹರಡುತ್ತಿದೆ. ಈಗ ತಾನೇ ನಾನು ಒಂದು ವರದಿಯನ್ನು ಆರೋಗ್ಯ ಇಲಾಖೆಯಿಂದ ತರಿಸಿಕೊಂಡೆ. ಒಂದು ವಾರದಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ 240 ಕೇಸ್ ಪಾಸಿಟೀವ್ ಅಂತ ಹೇಳಿ ತಿಳಿದಿರುವ ಸಂಗತಿ ನಮ್ಮ ಗಮನಕ್ಕೆ ಬಂದಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಇದೇ ಒಂದು ಮಲೇರಿಯಾ ರೋಗಕ್ಕೆ ತುತ್ತಾಗಿ ಇಬ್ಬರು ಸಾವಿಗೀಡಾಗಿದ್ದಾರೆ ಎನ್ನುವ ಸುದ್ದಿ ಬಂದಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ತೀರ್ಥಹಳ್ಳಿ, ಶಿಕಾರಿಪುರ, ಹೊಸನಗರ, ಭದ್ರಾವತಿಯಲ್ಲಿ ವ್ಯಾಪಕವಾಗಿ ಮಲೇರಿಯಾ ಹರಡುತ್ತಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಕೆಲವು ತಾಲ್ಲೂಕಿನಲ್ಲಿ ವ್ಯಾಪಕವಾಗಿದೆ. ಮೈಸೂರು ಜಿಲ್ಲೆಯಲ್ಲಿ ಹುಣಸೂರು ಮತ್ತು ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಈ ರೀತಿ ಮಲೇರಿಯಾ ರೋಗ ಹರಡುತ್ತಾ